ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು).—

ಅ) ಬಂದಿದೆ.

ಆ) ಇಲ್ಲ.

ಇ) ೧) ಉದ್ದಿಮೆಗಳಿಗೆ ಭೇಡಿ ನೀಡಿ ಕನ್ನಡ ಬಳಕೆ ಪ್ರಗತಿ ಬಗ್ಗೆ ಪರಿಶೀಲನೆ ನಡೆಸಿದೆ.

೨) ಉದ್ದಿಮೆಗಳ ಮುಖ್ಯಸ್ಥರ ಸಭೆಯಲ್ಲಿ ಸರ್ಕಾರದ ಭಾಷಾ ನೀತಿಯನ್ನು ಅನುಷ್ಠಾನ ಗೊಳಿಸಬೇಕಾದ ಅಗತ್ಯತೆಯನ್ನು ಸ್ಪಷ್ಟಪಡಿಸಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ೧೫೨ನೆ, ಪಟ್ಟಿಯಲ್ಲಿರುವ ೫೫ ಪ್ರಶ್ನೆಗಳ ಪೈಕಿ ಪ್ರಶ್ನೆ ಸಂಖ್ಯೆ ೮೧೫, ೭೨೪, ೮೨೦, ೭೭೪, ೬೮೦, ೬೬೫, ೭೭೪, ೬೮೦, ೬೬೫, ೭೪೬, ೭೪೭, ೭೪೭, ೭೪೬, ೭೪೭, ೮೩೩, ೮೧೦, ೮೧೧, ೫೬೯, ೪೬೯, ಮತ್ತು ೮೦ ೬೬೯ ಈ ಪ್ರಶ್ನೆಗಳನ್ನು ಹೊರತು ಪಡಿಸಿ ಇನ್ನು ಉಳಿದ ೪೧ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ರಾಜ್ಯದಲ್ಲಿ ವರದಕ್ಷಿಣೆ ಸಾವುಗಳ ಸಂಖ್ಯೆ ಕುರಿತಂ

೪೦೪ (೭೪೨) ಶ್ರೀ ಜಿ. ರಾಜಗೌಡ (ಹನೂರು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕಳೆದ ಮೂರು ವರ್ಷಗಳಿಂದ ಎಷ್ಟು ವರದಕ್ಷಿಣೆ ಸಾವು ಹಾಗೂ ಮಹಿಳೆಯರ ಮಾನಭಂಗ ಆಗಿದೆ ?

ಆ) ಎಷ್ಟು ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ ?

ಇ) ಆ ಪಿಡುಗುಗಳನ್ನು ನಡೆಯದಂತಾಗಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ?

ಶ್ರೀ ಎಂ. ವೀರಪಮೊಯಿಲಿ (ಮುಖ್ಯಮಂತ್ರಿಗಳು).—

ಅ)

ರಾಜ್ಯದಲ್ಲಿ ವರದಕ್ಷಿಣೆ ಮತ್ತು ಮಾನಭಂಗದ ಪ್ರಕರಣಗಳು				ಸಿ. ಒ, ಡಿ. ಯಿಂದ ತನಿಖೆಯಾದ ಪ್ರಕರಣಗಳು		
ವರದಕ್ಷಿಣೆ	೧೯೯೧	೧೯೯೨	೧೯೯	೩೧.೯೯೧	೧೯೯೨	೧೯೯೩
	೧೭೮	೧೮೦	೨೦೬		೪೭	೧೧೨	೨೦೨
ಮಾನಭಂಗ	೪೨೫	೪೯೬	೪೬೮		—	—	—
ಆ) ವಂದಕ್ಷಿಣೆ							
	೨	೧	—		೩	೧	—
ಮಾನಭಂಗ	೪	೧	—	—	—		—

ಇ) ಅನುಬಂಧ "ಎ'' ನಲ್ಲಿಡಲಾಗಿದೆ.

ಅನುಬಂಧ–ಎ

೧. ರಾಜ್ಯದಲ್ಲಿ ಹೆಚ್ಚುತ್ತಿರುವ ವರದಕ್ಷಿಣೆ ಸಾವು ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ತನಿಖೆ, ವಿಚಾರಣೆ ನಡೆಸಲು ಸಿ ಒ ಡಿ ಯಲ್ಲಿ ಒಂದು ಪ್ರತ್ಯೇಕ ದಳವನ್ನು ಸರ್ಕಾರವು ೧೯೯೪ ರಲ್ಲಿ ಮಂಜೂರು ಮಾಡಿದೆ. ಈ ದಳವು ಇದುವರೆವಿಗೂ ಸುಮಾರು ೬೫೦ ಕ್ಕೂ ಹೆಚ್ಚಿನ ವರದಕ್ಷಿಣೆ ಸಾವಿನ ಪ್ರಕರಣಗಳ ತನಿಖೆಯನ್ನು ಯಶಸ್ವಿಯಾಗಿ ಮಾಡಿ ಮುಗಿಸಿದೆ. ಸರ್ಕಾರವು ದಿನಾಂಕ ೨೫–೧–೯೨ರ ತನ್ನ ಆದೇಶದಲ್ಲಿ ವರದಕ್ಷಿಣೆ ನಿಷೇಧ ದಳಕ್ಕೆ ೨ ಉಪ ಆರಕ್ಷಕ ಅಧೀಕ್ಷಕರು, ೧೧ ಮಹಿಳಾ ಪೋಲೀಸ್ ನಿರೀಕ್ಷಕರು, ೪ ಪೋಲೀಸ್ ನಿರೀಕ್ಷಕರುಗಳು ಹೆಚ್ಚಿನ ಹುದ್ದೆಗಳನ್ನು ಇತರೆ ಸಲಕರಣೆಗಳೊಂದಿಗೆ ಮಂಜೂರು ಮಾಡಿದೆ.

೨. ವರದಕ್ಷಿಣೆ ಮತ್ತು ಮಹಿಳೆಯ ಮೇಲಿನ ದೌರ್ಜನ್ಯದ ಪ್ರಕರಣಗಳ ವಿಚಾರಣೆಗಾಗಿ, ಬೆಂಗಳೂರಿನಲ್ಲಿ ಒಂದು ವಿಶೇಷ ನ್ಯಾಯಾಲಯವನ್ನು ೧೯೯೦ ಆಗಸ್ಟ್ ತಿಂಗಳಿನಲ್ಲಿ ಸ್ಥಾಪಿಸಲಾಗಿದೆ. ಇದು ಪ್ರಕರಣಗಳ ಶೀಘ್ರ ವಿಲೇವಾರಿಗೆ ಬಹಳ ಸಹಾಯಕಾರಿಯಾಗಿದೆ.

೩. ೧೯೯೨ರಲ್ಲಿ ಈ ನ್ಯಾಯಾಲಯವು ೮ ಪ್ರಕರಣಗಳಲ್ಲಿ ಸಂಬಂಧಪಟ್ಟ ಆರೋಪಿಗಳಿಗೆ ಶಿಕ್ಷೆಯನ್ನು ವಿಧಿಸಿದೆ. ಈ ಶಿಕ್ಷೆಯ ಪ್ರಮಾಣವು ಜೀವಾವಧಿ ಶಿಕ್ಷೆಯು ಸೇರಿದಂತೆ ೭ ರಿಂದ ೩ ವರ್ಷಗಳ ಅವಧಿವರೆಗೆ ಆಗಿರುತ್ತದೆ.

೪. ಮಹಿಳೆಯ ಮೇಲಿನ ದೌರ್ಜನ್ಯದ ಪ್ರಕರಣಗಳ ವಿಶ್ಲೇಷಣೆ ನಡೆಸಿ, ಸೂಕ್ತ ಸಲಹೆಗಳನ್ನು ನೀಡಲು ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದ್ದು, ಸರ್ಕಾರದ ಕಾನೂನು ಕಾರ್ಯದರ್ಶಿಯವರು ಇದರ ಮುಖ್ಯಸ್ಥರಾಗಿರುತ್ತಾರೆ. ಪೋಲೀಸ್ ಮಹಾ ನಿರ್ದೇಶಕರು, ಸರ್ಕಾರದ ಒಳಾಡಳಿತ ಇಲಾಖೆಯ ಕಾರ್ಯದರ್ಶಿಗಳು ಮತ್ತು ಅಭಿಯೋಗ ನಿರ್ದೇಶಕರು ಈ ಸಮಿತಿಯ ಸದಸ್ಯರಾಗಿರುತ್ತಾರೆ.

೫. ವರದಕ್ಷಿಣೆ ಸಾವಿನ ಪ್ರಕರಣಗಳ ತನಿಖೆಯ ಕಾಲದಲ್ಲಿ ಉಂಟಾಗುವ ಲೋಪದೋಷಗಳು ಹಾಗೂ ಅಪರಾಧಗಳ ಮೇಲೆ ಶೀಘ್ರ ಕ್ರಮ ಕೈಗೊಳ್ಳಲು ಇರುವ ಅಡೆತಡೆಗಳನ್ನು ವಿಚಾರಿಸಲು ಸಾಧ್ಯವಾಗುವಂತೆ ವರದಕ್ಷಿಣೆ ನಿಷೇಧ ಕಾಯಿದೆಗೆ ತಿದ್ದುಪಡಿ ತರುವಂತೆ ಸೂಚಿಸಿ ೧೫ ಅಂಶಗಳುಳ್ಳ ಒಂದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

೬. ಮಹಿಳೆಯ ಮೇಲಿನ ದೌರ್ಜನ್ಯಗಳು ಮತ್ತು ವರದಕ್ಷಿಣೆ ಸಾವಿನ ಪ್ರಕರಣಗಳನ್ನು ತನಿಖೆ ಮಾಡುವ ಪೋಲೀಸ್ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳು, ಚರ್ಚಾಕೂಟಗಳನ್ನು ಏರ್ಪಡಿಸಿದ್ದು, ಸಮಾಜ ಸೇವಕರು, ವೈದ್ಯಕೀಯ ವೃತ್ತಿಯವರು, ಕಾನೂನು ಪರಿಣಿತರನ್ನು ಕರೆಯಿಸಿ ಉಪನ್ಯಾಸ ನಿಡಲಾಗುತ್ತಿದೆ ಹಾಗೂ ವರದಕ್ಷಿಣೆ ಎಂಬ ಭೂತದ ಬಗ್ಗೆ ಸಮಾಜವನ್ನು ಎಚ್ಚರಗೊಳಿಸಲಾಗುತ್ತಿದೆ.

೭. ಮಹಿಳೆಯ ಮೇಲಿನ ದೌರ್ಜನ್ಯಗಳಲ್ಲಿ ನ್ಯಾಯಾಲಯವು ಆರೋಪಿಗಳಿಗೆ ಶಿಕ್ಷೆ ವಿಧಿಸಿದ ಬಗ್ಗೆ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ನೀಡಲಾಗುತ್ತಿದೆ.

೮. ವರದಕ್ಷಿಣೆ ಸಾವಿನ ಪ್ರಕರಣಗಳನ್ನು ಘೋರ ಅಪರಾಧವೆಂದು ಪರಿಗಣಿಸಿ ಇಲಾಖೆಯ ಉನ್ನತ ಅಧಿಕಾರಿಗಳ ಅಂದರೆ ಡಿವೈ. ಎಸ್. ಪಿ. ದರ್ಜೆಯ ಅಧಿಕಾರಿಗಳಿಂದ ತನಿಖೆಯನ್ನು ನಡೆಸಲಾಗುತ್ತಿದೆ.

೯. ವರದಕ್ಷಿಣೆಯ ಸಮಸ್ಯೆಗಳ ನಿವಾರಣೆಗಾಗಿ ಪೋಲೀಸ್ ಇಲಾಖೆಯ ಅಧಿಕಾರಿಗಳು, ಅಭಿಯೋಜಕರುಗಳು ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಆಗಾಗ ಸಭೆ ಸೇರಿ ಚರ್ಚಿಸಿ, ಸಾಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಶಿವಾಜಿನಗರ ಬಸ್ ಸ್ಟ್ಯಾಂಡ್‌ನಲ್ಲಿ ಅತಿ ಹೆಚ್ಚಳವಾದ ನಗರ ಸಾರಿಗೆ ಬಸ್ಸುಗಳ ಸಂಚಾರ

೪೧೫ (೮೧೫) ಶ್ರೀ ಎ. ಕೆ. ಆನಂತಕೃಷ್ಣ (ಶಿವಾಜಿನಗರ); ಮಾನ್ಯ—ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಶಿವಾಜಿನಗರ ಬಸ್‌ಸ್ಟ್ಯಾಂಡ್‌ನಲ್ಲಿ ಅತಿ ಹೆಚ್ಚಳವಾದ ನಗರ ಸಾರಿಗೆ ಬಸ್ಸುಗಳು ಒಡಾಡುವುದನ್ನು ತಡೆಗಟ್ಟಲು : ಕಡಿವೆ ಮಾಡಲು ನಾಗರೀಕರಿಂದ ಹಾಗೂ ಜನರಿಂದ ಆಯ್ಕೆಯಾದವರಿಂದ ಹಲವಾರು ಮನವಿಗಳು ಸದನದಲ್ಲಿ ಸಲ್ಲಿಸಿದ್ದಾಗ್ಯೂ ಇದರ ಬಗ್ಗೆ ಸರ್ಕಾರದವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹಾಗೂ ಸಂಚಾರ ಪೋಲೀಸ್ ಇಲಾಖೆಯವರು ಅಗತ್ಯ ಕ್ರಮ ತೆಗೆದುಕೊಳ್ಳುತ್ತಿಲ್ಲಾ. ಕಾರಣವೇನು?

ಆ) ಸಂಚಾರ ಪೋಲೀಸರಿಂದ ಹಾಗೂ ಬೆಂಗಳೂರು ನಗರ ಸಾರಿಗೆ ಅಧಿಕಾರದವರಿಂದ ಸಂಚಾರ ಮತ್ತು ನಿಲುಗಡೆಯನ್ನು ಸರಿಯಾಗಿ ನಿರ್ವಹಿಸದೇ ಇರುವ ಕಾರಣವಾಗಿ ಶಿವಾಜಿನಗರ ಬಸ್ ನಿಲ್ದಾಣದಲ್ಲಿ ಬೆಂಗಳೂರು ನಗರ ಸಾರಿಗೆ ಬಸ್ಸುಗಳು ನಿಲುಗಡೆಯಲ್ಲೇ ಸರಿಯಾಗಿಲ್ಲದೇ ಮುಖ್ಯ ರಸ್ತೆಗಳಲ್ಲಿ ನಿಲ್ಲುತ್ತಿವೆ?

ಇ) ಬೆಂಗಳೂರು ನಗರ ಸಾರಿಗೆ ಬಸ್ಸುಗಳನ್ನು ಸರಿಯಾದ ಸ್ಥಳಗಳಲ್ಲಿ ನಿಲ್ಲಿಸಲು (ಬಸ್ ನಿಲ್ದಾಣದಲ್ಲಿ) ಸರ್ಕಾರವು ಅಸಮರ್ಥವಾಗಿದೆಯೇ ?